ಇ) ಈ ಫಾರಂನ್ನು ಮೂಲ ಇಲಾಖೆಯಾದ ಕಂದಾಯ ಇಲಾಖೆಗೆ ಬಿಟ್ಟು ಕೂಡಲು ತೆಗೆದುಕೊಂಡ ಕ್ರಮವೇನು?

ಶ್ರೀ ಸಿ. ಚೆನ್ನಪ್ಪ (ರೇಷ್ಮೆ ಸಚಿವರು)

ಅ) ಹೌದು

ಆ) ಈ ಕ್ಷೇತ್ರವನ್ನು ಕಾರಣ ಸಂಪೂರ್ಣವಾಗಿ ಕಂದಾಯ ಇಲಾಖೆಗೆ ಹಿಂತಿರುಗಿಸಲು ಚಿಂತನೆ ನಡೆದಿದೆ.

ಇ) ಜಮೀನನ್ನು ಕಂದಾಯ ಇಲಾಖೆಗೆ ಮರಳಿಸಲು ರೇಷ್ಮೆ ಇಲಾಖೆಯಿಂದ ಸಲ್ಲಿಸಲಾದ ಪ್ರಸ್ತಾವನೆಯು ಸರ್ಕಾರದ ಪರಿದಸಶೀಲನೆಯಲ್ಲಿದೆ.

454(915) ಶ್ರೀ ಪಾಟೀಲ್ ಬಿ.ಆರ್(ಆಳಂದ್) ಮಾನ್ಯ ಸಕ್ಕರೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೇಂದ್ರ ಸರ್ಕಾರವು ಈ ವರ್ಷ ನಿಗದಿಮಾಡಿರುವ ಕಬ್ಬಿನ ಕನಿಷ್ಟ ಬೆಲೆಯು ಕಳೆದ ವರ್ಷಕ್ಕಿಂತ ಕಡಿಮೆ ಆಗಿದೆಯೇ?

ಆ) ಸರ್ಕಾರವು ರೈತರ ಹಿತ ರಕ್ಷಿಸಲು ರಾಜ್ಯ ಮಟ್ಟದ ಸಲಹಾ ಬೆಲೆಯನ್ನು ಪ್ರತಿ ಕಾರ್ಖಾನೆಗೂ ಸೂಚಿಸಿದೆಯೇ?

ಇ) ಹಾಗಿಲ್ಲದಿದ್ದಲಿ ಕಾರಣವೇನು?

ಶ್ರೀ ಅಮರೇಗೌಡ. ಎಲ್. ಪಾಟೀಲ್ ಬಯ್ಯಾಪುರ (ಸಕ್ಕರೆ ಸಚಿವರು) :

ಅ) ಕಡಿಮೆಯಾಗಿಲ್ಲ, ಕಳೆದ ವರ್ಷಕ್ಕಿಂತ ರೂ. 15/- ಹೆಚ್ಚಾಗಿದೆ.

ಆ) ಇಲ್ಲ

ಇ) 1994ರವರೆಗೆ ರಾಜ್ಯ ಸರ್ಕಾರವು ಸಲಹಾ ಬೆಲೆಯನ್ನು ಪ್ರತಿ ಕಾರ್ಖಾನೆಗೂ ಸೂಚಿಸಿ ಆದೇಶ ಹೂರಡಿಸುತ್ತಿತ್ತು. ಕೆಲವು ಖಾಸಗಿ ಕಾಖಾನೆಗಳು ಈ ವಿಷಯದ ಮೇಲೆ ನ್ಯಾಯಾಲಯಕ್ಕೆ ಹೋದ ಪ್ರಯುಕ್ತ ಮಾನ್ಯ ನ್ಯಾಯಾಲಯವು ಖಾಸಗಿ ಕಾರ್ಖಾನೆಗಳ ಮನವಿಯನ್ನು ಪುರಸ್ಕರಿಸಿ ರಾಜ್ಯ ಸರ್ಕಾರಕ್ಕೆ ಸಲಹಾ ಬೆಲೆಯನ್ನು ನಿಗದಿಪಡಿಸುವ ಅದಿಕಾರವಿಲ್ಲವೇಂದು ಆದೇಶಿಸಿದ ಪ್ರಯುಕ್ತ ಅಲ್ಲಿಂದೀಚೆಗೆ ರಾಜ್ಯ ಸರ್ಕಾರವು ಸಲಹಾ ಬೆಲೆಯನ್ನು ನಿಗದಿಪಡಿಸುತ್ತಿಲ್ಲ.

456(1135) ಶ್ರೀ ಪಾಟೀಲ್ ಡಿ.ಆರ್(ಗದಗ್) ಮಾನ್ಯ ಭಾರಿ, ಮಾಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸರ್ಕಾರ ಅದಿಕಾರಕ್ಕೆ ಬಂದಾಗ ಸಣ್ಣ ಕೈಗಾರಿಕೆಗಳಿಗೆ ಕೂಡ ಬೇಕಾಗಿರುವ ಬಾಕಿ ಸಬ್ಸಿಡಿ ಹಣವಷ್ಟು(ಜಿಲ್ಲಾವಾರು ವಿವರ ನೀಡುವುದು);

ಆ) ಅದರಲ್ಲಿ ಈಗ ಬಿಡುಗಡೆಯಾಗಿರುವ ಹಣವೆಷ್ಟು (ಜಿಲ್ಲೆವಾರು ವಿವರ ನೀಡುವುದು)

ಇ) ಉಳಿದ ಬಾಕಿ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ತೆಗೆದುಕೂಂಡಿರುವ ಕ್ರಮವನ್ನು; ಕಾಲಮಿತಿ ಎಷ್ಟು?

ಶ್ರೀ.ಪಿ.ಜಿ. ಆರ್. ಸಿಂಧ್ಯ (ಭಾರಿ, ಮಾಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಾಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ದಿನಾಂಕ: 31.3.2004ಕ್ಕೆ 19555 ಘಟಕಗಳಿಗೆ ರೂ. 429.43 ಕೋಟಿ ಬಿಡುಗಡೆಗೆ ಬಾಕಿ ುತ್ತದೆ.(ಜಿಲ್ಲಾವಾರು ವಿವರ ಲಗತಿಸಲಾಗಿದೆ)

2004–05ನೇ ಸಾಲಿನಲ್ಲಿ ರೂ. 77.59 ಕೋಟಿ ಸಹಾಯ ಧನವನ್ನು ಒಟ್ಟು 6562 ಘಟಗಳಿಗೆ ಾಜೂರಾದ ಸಹಾಯಧನದಲ್ಲಿ ಶೇ. 50ರಂತೆ ಬಿಡುಗಡೆ ಮಾಡಲಾಗಿದೆ(ಪಟ್ಟಿ ಲಗುತಿಸಿದೆ)

ಇ) ಬಾಕಿ ಉಳಿದ ಸಹಾಯಧನವನ್ನು 2004–05 ಹಾಗೂ 2005–06ನೇ ಸಾಲಿನಲ್ಲಿ ಾಡಲಾಗುವುದು.

ANNEXURE

DETAILS OF TOTAL NUMBER OF UNITS SENT TO KSFC FOR RELEASE OF 50% SUBSIDY ON DISTRICT COMMITEE REPORTS AS ON 27.12.2004

Sl. No	Name of the District	No. of units	50% of the sanctioned amount released
01	Bagalkot	172	15235100
02	Bangalore(Rural)	232	31555648
03	Bangalore(Urban)	396	114838973
04	Belgaum	682	50393871
05	Bellary	232	33572725
06	Bijapur	114	12170655
07	Chamarajnagar	53	2565195
08	Chikmangalur	109	9361465
09	Chitradurga	133	15044637
10	Dhakshinakannada	459	56537680
11	Davanagere	146	16145850
12	Dharwad	309	4351150
13	Gadag	178	7312278
14	Gulgarga	204	31453503

15	Hassan	273	23914400
16	Haveri	102	7022650
17	Karwar	579	52635375
18	Kodagu	54	8866625
19	Kolar	184	23392387
20	Koppal	102	18100850
21	Mandya	140	11855025
22	Mysore	350	48193825
23	Raichur	100	12179000
24	Shimoga	172	1553575
25	Tumkur	492	55988650
26	Udupi	547	55174855
27	Bidar	48	3818180
	Total	**6562**	**775915827**

458(753) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ ಸಚಿವರು ಮಸೀದಿಗೆ ಅನುದಾನ ಮಂಜೂರಾಗಿರುವ ಕುರಿತು, ದಯವಿಟ್ಟು ಈ ಕಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗದಗ ತಾಲ್ಲೂಕು ದರ್ಗಾಪೂರ್ ಗ್ರಾಮದ ಮಸೀದಿಗೆ ಸರ್ಕಾರದಿಂದ ಅನುದಾನ ಮಂಜೂರಾಗಿದ್ದರೂ. ಸಹ ಈವರೆಗೆ ಬಿಡುಗಡೆ ಮಾಡದಿರಲು ಕಾರಣವೇನು?

ಆ) ವಿಳಂಬ ಮಾಡಿದವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಇ) ಅನುದಾನ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಮೆರಾಜುದ್ದೀನ್ ಎನ್ ಪಟೀಲ್ (ಪಶುಸಂಗೋಪನೆ ಮತ್ತು ವಕ್ಫ ಸಚಿವರ):

ಅ) ಗದಗ ತಾಲ್ಲೂಕಿನ ಹರ್ಲಾಪುರ ಗ್ರಾಮದ ಮಸೀದಿಗೆ ಸರ್ಕಾರದ ಆದೇಶ ಸಂಖ್ಯೆ:ಆರಡಿ 36 ಡಬ್ಲ್ಯುಜಿಎ 2002, ದಿನಾಂಕ:15-03-03 ರನ್ವಯ ರೂ. 30,000-00 ಗಳ ಅನುದಾನ ಮಂಜೂರು ಮಾಡಲಾಗಿತ್ತು. ನಿಯಮಾನುಸಾರವಾಗಿ ಈ ಹಣವನ್ನು 6 ತಿಂಗಳ ಒಳಗೆ ಉಪಯೋಗಿಸಬೇಕಿರುತ್ತೆ. ಅದರೆ ಸದರಿ ಸಂಸ್ಥೆಯವರು ಸಕಾಲದಲ್ಲಿ ಅಗತ್ಯ ದಾಖಲಾತಿಗಳನ್ನು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯವರಿಗೆ ಸಲ್ಲಿಸದೆ ಇದ್ದ ಕಾರಣ, ಮಂಡಳಿಯವರು ಸದರಿ ಹಣ ವಿತರಿಸಿರುವುದಿಲ್ಲ.

ಆ) ಈ ವಿಷಯ ಕುರಿತು ಸರ್ಕಾರದ ಮಟ್ಟದಲ್ಲಿ ಅಥವಾ ಕರ್ನಾಟಕ ರಾಜ್ಯ ವಕ್ಫ ಮಂಡಳಿ ಅಧಿಕಾರಿ: ಸಿಬ್ಬಂದಿಯವರು ಕರ್ತವ್ಯ ಲೋಪ ಅಥವಾ ಅನಾವಶ್ಯ ವಿಳಂಬ ಮಾಡಿದಾರೆ ಎಂದು